# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 447
2. ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 23/09/2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ. | ಬಂದಿದ್ದಲ್ಲಿ, ಸರ್ಕಾರ ಇದರ ನಿವಾರಣೆಗೆ ಕೈಗೊಂಡಿರುವ ಕ್ರಮಗಳೇನು; | **ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಇರುವ ತೊಂದರೆಯ ನಿವಾರಣೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**<br>I. ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ರಾಜ್ಯಾದ್ಯಂತ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಲಾಗಿದೆ. ರೈತರು ತಾವು ಬೆಳೆದ ಉತ್ಪನ್ನಗಳನ್ನು ರಾಜ್ಯದ ಯಾವುದೇ ಮಾರುಕಟ್ಟೆಗಳಿಗೆ ಕೊಂಡೊಯ್ಯಲು ಅವಕಾಶ ಕಲ್ಪಿಸಲಾಗಿದೆ.<br>II. ರೈತರಿಗೆ ಸಾಗಾಣಿಕೆ ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ ಮಾರುಕಟ್ಟೆ ಪ್ರಾಂಗಣದ ಹೊರಗೆ 352 ಉಪ ಮಾರುಕಟ್ಟೆಗಳನ್ನು ಸ್ಥಾಪಿಸಲಾಗಿದೆ.<br>III. ಖಾಸಗಿ ಮಾರುಕಟ್ಟೆ, ನೇರ ಖರೀದಿ ಕೇಂದ್ರಗಳು ಹಾಗೂ ಉಗ್ರಾಣಗಳನ್ನು ಮಾರುಕಟ್ಟೆ ಉಪ ಪ್ರಾಂಗಣವೆಂದು ಘೋಷಿಸಿ ಹತ್ತಿರದಲ್ಲಿಯೇ ರೈತರ ಉತ್ಪನ್ನಗಳನ್ನು ಮಾರಾಟ ಮಾಡಲು ಹಾಗೂ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.<br>IV. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ತಮ್ಮ ಸ್ವಂತ ಅಥವಾ ಇತರೆ ಏಜೆನ್ಸಿಗಳೊಂದಿಗೆ ಸಾಗಾಣಿಕೆ ಸೌಲಭ್ಯ ಕಲ್ಪಿಸಲು ರೈತರು ಮಾರುಕಟ್ಟೆ ಸಮಿತಿಗಳನ್ನು ಸಂಪರ್ಕಿಸಿದಲ್ಲಿ ಸಂಪನ್ಮೂಲಗಳ ಲಭ್ಯತೆ ಹಾಗೂ ಅವಶ್ಯಕತೆಗನುಗುಣವಾಗಿ ಸಾಗಾಣಿಕೆ ವ್ಯವಸ್ಥೆ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ.<br>V. ಕೇಂದ್ರ ಸರ್ಕಾರದ ಕಿಸಾನ್ ರಥ್ ಎಂಬ ಮೊಬೈಲ್ ಆಪ್ ಬಳಕೆಯ ಮೂಲಕ ರೈತರು ಹಾಗೂ ವರ್ತಕರು ಆಹಾರ ಧಾನ್ಯಗಳು ಹಾಗೂ ಶೀಘ್ರ ಹಾಳಾಗುವ ಉತ್ಪನ್ನಗಳನ್ನು ಮಾರುಕಟ್ಟೆ ಪ್ರಾಂಗಣಗಳಿಗೆ ಸಾಗಣೆ ಮಾಡಲು ಅನುಕೂಲ ಕಲ್ಪಿಸಲಾಗಿದೆ.<br>VI. Atma Nirbhar Bharat Abhiyan ಯೋಜನೆಯ TOP to TOTAL ಕಾರ್ಯಕ್ರಮದಡಿ ಹಣ್ಣು ಮತ್ತು ತರಕಾರಿಗಳು ಉತ್ಪಾದನೆಯಾಗುವ ಸ್ಥಳದಿಂದ ಬಳಕೆಯ ಸ್ಥಳಕ್ಕೆ ಅಥವಾ ಶೇಖರಣಾ ಸ್ಥಳಕ್ಕೆ ಸಾಗಾಣಿಕೆಗೆ ತಗುಲುವ ವೆಚ್ಚದಲ್ಲಿ ಶೇ.50ರಷ್ಟನ್ನು ಸಹಾಯಧನದ ರೂಪದಲ್ಲಿ ಕೇಂದ್ರ ಸರ್ಕಾರವು ನೀಡುತ್ತದೆ. |

| | | |
|---|---|---|
| ಇ. | ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾಧ್ಯವಾಗದೆ ಬೆಳೆ ನಾಶ ಮತ್ತು ಕೊಳೆಯುವಿಕೆಗಳನ್ನು ತಡೆಗಟ್ಟಲು ಸರ್ಕಾರದ ಮುಂದಿರುವ ಯೋಜನೆಗಳೇನು? | ತೋಟಗಾರಿಕೆ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಸಾಧ್ಯವಾಗದೆ ಬೆಳೆ ನಾಶ ಮತ್ತು ಕೊಳೆಯುವಿಕೆಗಳನ್ನು ತಡೆಗಟ್ಟಲು ತೋಟಗಾರಿಕೆ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಲಾಗಿರುತ್ತದೆ.<br>**1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ "Incentives for Post-Harvest Management Activites" ಕಾರ್ಯಕ್ರಮದಡಿ**<br>ಅ) ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕದ ಒಟ್ಟಾರೆ ವೆಚ್ಚ ರೂ.200.00 ಲಕ್ಷಗಳಿಗೆ ಶೇ.25ರಂತೆ ಗರಿಷ್ಠ ರೂ.50.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>ಆ) ಈರುಳ್ಳಿ ಸಂಗ್ರಹಣಾ ಘಟಕದ ಒಟ್ಟಾರೆ ವೆಚ್ಚ ರೂ.1.75 ಲಕ್ಷಗಳಿಗೆ ಶೇ. 50 ರಂತೆ ಗರಿಷ್ಠ ರೂ. 0.875 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>**2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ**<br>ಅ) ಪ್ಯಾಕ್ ಹೌಸ್ ಘಟಕದ ಒಟ್ಟಾರೆ ವೆಚ್ಚ ರೂ.4.00 ಲಕ್ಷಗಳಿಗೆ ಶೇ.50 ರಂತೆ ಗರಿಷ್ಠ ರೂ.2.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>ಆ) ಪ್ರಾಥಮಿಕ ಸಂಸ್ಕರಣಾ ಘಟಕದ ಒಟ್ಟಾರೆ ವೆಚ್ಚ ರೂ.25.00 ಲಕ್ಷಗಳಿಗೆ ಶೇ.40 ರಂತೆ ಗರಿಷ್ಠ ರೂ.10.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>ಇ) ಈರುಳ್ಳಿ ಶೇಖರಣಾ ಘಟಕದ ಒಟ್ಟಾರೆ ವೆಚ್ಚ ರೂ.1.75 ಲಕ್ಷಗಳಿಗೆ ಶೇ. 50ರಂತೆ ಗರಿಷ್ಠ ರೂ.0.875 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>ಈ) ಖಾಸಗಿ ಅಥವಾ ಸಹಕಾರಿ ರಂಗದಲ್ಲಿ ಶೀತಲಗೃಹವನ್ನು ರೈತರು ತಾವೇ ನಿರ್ಮಿಸಿಕೊಂಡಲ್ಲಿ ಅದಕ್ಕೆ ಸರ್ಕಾರದಿಂದ ಶೇ.35 ರಷ್ಟು ಸಹಾಯಧನ ನೀಡಲಾಗುತ್ತದೆ.<br>Type-1 ಗರಿಷ್ಠ 5000 MT ಸಾಮರ್ಥ್ಯದ ಶೀತಲಗೃಹ ಘಟಕ ಸ್ಥಾಪನೆಗೆ ಒಟ್ಟಾರೆ ವೆಚ್ಚ ರೂ. 8000/- ಪ್ರತಿ MT ಶೇ.35ರಂತೆ ಗರಿಷ್ಠ ರೂ.140.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>Type-2 ಗರಿಷ್ಠ 5000 MT ಸಾಮರ್ಥ್ಯದ ಶೀತಲಗೃಹ ಘಟಕ ಸ್ಥಾಪನೆಗೆ ಒಟ್ಟಾರೆ ವೆಚ್ಚ ರೂ.10000/- ಪ್ರತಿ MT ಶೇ.35 ರಂತೆ ಗರಿಷ್ಠ ರೂ.175.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತದೆ.<br>**3. ಜಿಲ್ಲಾ ವಲಯ ಯೋಜನೆಯಾದ "ಶೈತ್ಯಾಗಾರಗಳಿಗೆ ಧನ ಸಹಾಯ (ಡಿ-07) ಕಾರ್ಯಕ್ರಮದಡಿ**<br>ತೋಟಗಾರಿಕೆ ಉತ್ಪನ್ನಗಳನ್ನು ಶೇಖರಿಸಿಡಲು ಶೀಥಲಗೃಹಗಳ ನಿರ್ವಹಣೆಗೆ ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ.1/- ರಂತೆ ಸಹಾಯಧನ ನೀಡಲಾಗುತ್ತದೆ. |

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು.

ಕಡತ ಸಂಖ್ಯೆ: ಸಿಒ 470 ಎಂಆರ್ಇ 2020